# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : | 1296 (1469) |
| ಸದಸ್ಯರ ಹೆಸರು | : | ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 18.12.2025 |
| ಉತ್ತರಿಸುವ ಸಚಿವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ, ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಎಷ್ಟು ವಿಮಾನ ನಿಲ್ದಾಣಗಳಿವೆ: (ವಿವರ ನೀಡುವುದು) | ಕರ್ನಾಟಕ ರಾಜ್ಯದಲ್ಲಿ ಒಟ್ಟು 10 ವಿಮಾನ ನಿಲ್ದಾಣಗಳಿದ್ದು, ಅವುಗಳ ವಿವರ ಈ ಕೆಳಕಂಡತಿವೆ.<br>1. ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ, ಬೆಂಗಳೂರು (International)<br>2. ಮಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ (International),<br>3. ಹುಬ್ಬಳಿ ವಿಮಾನ ನಿಲ್ದಾಣ (Domestic)<br>4. ಬೆಳಗಾವಿ ವಿಮಾನ ನಿಲ್ದಾಣ (Domestic)<br>5. ಕಲಬುರಗಿ ವಿಮಾನ ನಿಲ್ದಾಣ (Domestic)<br>6. ಮೈಸೂರು ವಿಮಾನ ನಿಲ್ದಾಣ (Domestic)<br>7. ಬೀದರ್ (ರಕ್ಷಣಾ) ವಿಮಾನ ನಿಲ್ದಾಣ (Domestic)<br>8. ಶಿವಮೊಗ್ಗ ವಿಮಾನ ನಿಲ್ದಾಣ (Domestic)<br>9. ವಿದ್ಯಾನಗರ (ಬಳ್ಳಾರಿ) ವಿಮಾನ ನಿಲ್ದಾಣ (Domestic- Private)<br>10. ಬಲ್ದೋಟ (ಕೊಪ್ಪಳ) ವಿಮಾನ ನಿಲ್ದಾಣ (Private) |
| (ಆ) | ಎಷ್ಟು ಜಿಲ್ಲಾ ಕೇಂದ್ರಗಳು ವಿಮಾನ ನಿಲ್ದಾಣ ಸಂಪರ್ಕ ಹೊಂದಿವೆ:(ವಿವರ ನೀಡುವುದು) | ರಾಜ್ಯದ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ, ದಕ್ಷಿಣ ಕನ್ನಡ, ಹುಬ್ಬಳಿ, ಬೆಳಗಾವಿ, ಕಲಬುರಗಿ, ಮೈಸೂರು, ಬೀದರ್, ಶಿವಮೊಗ್ಗ ಮತ್ತು ಬಳ್ಳಾರಿ ಜಿಲ್ಲಾ ಕೇಂದ್ರಗಳಲ್ಲಿ ವಿಮಾನ ನಿಲ್ದಾಣ ಸಂಪರ್ಕವನ್ನು ಹೊಂದಿರುತ್ತವೆ. |
| (ಇ) | ರಾಜ್ಯದ ಯಾವ ಜಿಲ್ಲೆಗಳಲ್ಲಿ ವಿಮಾನ ನಿಲ್ದಾಣ ಇಲ್ಲ: :(ವಿವರ ನೀಡುವುದು) | ಚಾಮರಾಜನಗರ, ಮಂಡ್ಯ, ಕೊಡಗು, ಚಿಕ್ಕಮಗಳೂರು, ಕೋಲಾರ, ರಾಮನಗರ, ಚಿಕ್ಕಬಳಾಪುರ, ಚಿತ್ರದುರ್ಗ, ದಾವಣಗೆರೆ, ಹಾವೇರಿ, ಗದಗ, ಉತ್ತರ ಕನ್ನಡ, ಕೊಪ್ಪಳ, ಬಾಗಲಕೋಟೆ, ಯಾದಗಿರಿ, ವಿಜಯನಗರ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ವಿಮಾನ ನಿಲ್ದಾಣಗಳಿರುವುದಿಲ್ಲ. |
| (ಈ) | ರಾಜ್ಯದಲ್ಲಿ ಸರ್ಕಾರವು ಯಾವ ಯಾವ ಜಿಲ್ಲೆಗಳಲ್ಲಿ ವಿಮಾನ ನಿಲ್ದಾಣ ಸ್ಥಾಪಿಸಲು ಮುಂದಾಗಿದೆ: | ರಾಜ್ಯದಲ್ಲಿ ವಿಜಯಪುರ ವಿಮಾನ ನಿಲ್ದಾಣದ ಕಾಮಗಾರಿಗಳು ಪೂರ್ಣಗೊಂಡು ನಾಗರೀಕ ವಿಮಾಯಾನವನ್ನು ಕೈಗೊಳ್ಳಲು ಸರ್ಕಾರವು ಉದ್ದೇಶಿಸಿರುತ್ತದೆ.<br>ರಾಜ್ಯದಲ್ಲಿ ಹಾಸನ ಮತ್ತು ರಾಯಚೂರು ವಿಮಾನ ನಿಲ್ದಾಣಗಳ ಕಾಮಗಾರಿಯು ಪ್ರಗತಿಯಲ್ಲಿವೆ.<br>ರಾಜ್ಯದ ಬಳ್ಳಾರಿ ಮತ್ತು ಕಾರವಾರದಲ್ಲಿ ವಿಮಾನ ನಿಲ್ದಾಣಗಳ ಅಧ್ಯಯನಗಳನ್ನು ಕೈಗೆತ್ತಿಕೊಳ್ಳಲು ಕ್ರಮವಹಿಸಿದೆ. |

| | | |
|---|---|---|
| | | ರಾಜ್ಯದ ಬೆಂಗಳೂರು ನಗರಕ್ಕೆ ಎರಡನೇ ವಿಮಾನ ನಿಲ್ದಾಣದ ಪೂರ್ವ ಕಾರ್ಯ ಸಾಧ್ಯತಾ ವರದಿಯನ್ನು ಕೈಗೊಳ್ಳಲು ಕ್ರಮವಹಿಸಿದೆ. |
| (ಉ) | ರಾಜ್ಯದಲ್ಲಿ ಎಷ್ಟು ವಿಮಾನ ಪೈಲೆಟ್ ತರಬೇತಿ ಕೇಂದ್ರಗಳು ಇವೆ; | ರಾಜ್ಯದ ಈ ಕೆಳಕಂಡ ವಿಮಾನ ನಿಲ್ದಾಣಗಳಲ್ಲಿ ವಿಮಾನ ಪೈಲೆಟ್ ತರಬೇತಿ ಕೇಂದ್ರಗಳಿರುತ್ತವೆ.<br>1. ಮೈಸೂರು ವಿಮಾನ ನಿಲ್ದಾಣ (ಎಎಐ)<br>2. ಹುಬ್ಬಳಿ ವಿಮಾನ ನಿಲ್ದಾಣ(ಎಎಐ)<br>3. ಬೆಳಗಾವಿ ವಿಮಾನ ನಿಲ್ದಾಣ(ಎಎಐ)<br>4. ಕಲಬುರಗಿ ವಿಮಾನ ನಿಲ್ದಾಣ(ಎಎಐ)<br>5. ಜಕ್ಕೂರು ವಿಮಾನ ನಿಲ್ದಾಣ (ರಾಜ್ಯ ಸರ್ಕಾರ) |
| (ಊ) | ವಿಮಾನ ಪೈಲೆಟ್ ತರಬೇತಿ ಕೇಂದ್ರ ತೆರೆಯಲು ಇರುವ ಮಾನದಂಡಗಳೇನು? | ವಿಮಾನ ನಿಲ್ದಾಣದಲ್ಲಿ ಪೈಲೆಟ್ ತರಬೇತಿ ಕೇಂದ್ರವನ್ನು ಸ್ಥಾಪಿಸಲು (Directorate General of Civil Aviation (DGCA) ಯ ವಿಮಾನ ನಿಯಮಗಳು, 1937 ಮತ್ತು ನಾಗರಿಕ ವಿಮಾನ ಯಾನ ಅಗತ್ಯತೆಗಳು (CAR), ವಿಭಾಗ 7, ಸರಣಿ D ಅಡಿಯಲ್ಲಿ DGCA ಯ ಪೂರ್ವಾನುಮೋದನೆ ಪಡೆಯುವುದು ಕಡ್ಡಾಯವಾಗಿರುತ್ತದೆ. |

ಸಂಖ್ಯೆ:ಮೂಅಇ 271 ರಾಅವಿ 2025

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ, ಸಚಿವರು